ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 18-01-1996.

# *ಸದಾ ಸಮರ್ಥರಾಗಿರುವ ಸಲುವಾಗಿ ಸಹಜವಾದ ವಿಧಿ ಶುಭಚಿಂತನೆ ಮಾಡಿರಿ ಹಾಗೂ ಶುಭಚಿಂತಕರಾಗಿರಿ.*

(सदा समर्थ रहने की सहज विधि- शुभाचिंतन करो और शुभ चिन्तक बनो)

ಇಂದು ಸ್ನೇಹ ಸಂಪನ್ನ ಸ್ಮೃತಿ ದಿವಸವಾಗಿದೆ ನಾಲ್ಕೂ ಕಡೆಯ ಮಕ್ಕಳ ಸ್ನೇಹದ ಹೃದಯದ ಆಲಾಪವು ಬಾಪ್‌ದಾದಾರವರ ಬಳಿ ತಲುಪಿ ಬಿಟ್ಟಿದೆ. ಈ ಸ್ನೇಹವು ಸುಖ ಸ್ವರೂಪವಾದ ಸ್ನೇಹವಾಗಿದೆ. ಬಾಪ್‌ದಾದಾರವರು, ಈ ದಿವಸವನ್ನು ಸ್ಮೃತಿದಿವಸದ ಜೊತೆ ಜೊತೆಯಲ್ಲಿ ಸಮರ್ಥ ದಿನವೆಂದೂ ಕರೆಯುತ್ತಾರೆ. ಏಕೆಂದರೆ ಬ್ರಹ್ಮಾಬಾಬಾರವರು ತಮ್ಮ ಸಾಕಾರ ಸ್ವರೂಪದಲ್ಲಿ ಸರ್ವ ಕಾರ್ಯಗಳನ್ನೂ ಮಾಡುವ ಸಾಮರ್ಥ್ಯಗಳು ಮತ್ತು ಶಕ್ತಿಗಳನ್ನು ಸಾಕಾರ ರೂಪದಲ್ಲಿ ಮಕ್ಕಳಿಗೆ ಅರ್ಪಣೆ ಮಾಡಿದರು. ಈ ದಿವಸಕ್ಕೆ ಸನ್ ಷೋಸ್ ಪಾದರ್‌ನ (ತಂದೆ ಎಂತಹವರಾಗಿದ್ದಾರೆ ಎಂಬುದನ್ನು ಮಗನು ತೋರಿಸುತ್ತಾನೆ ಎನ್ನುವ) ವರದಾನದ ದಿನವೆಂದೂ ಕರೆಯಲಾಗುತ್ತದೆ. ಸಾಕಾರ ರೂಪದಲ್ಲಿ ಮಕ್ಕಳನ್ನು ಮುಂದಿಟ್ಟರು ಹಾಗೂ ಸೂಕ್ಷ್ಮ ದೇವತಾ ರೂಪದಲ್ಲಿ ತಮ್ಮ ಮಕ್ಕಳ ಹಾಗೂ ವಿಶ್ವದ ಸೇವೆಯನ್ನು ಆರಂಭ ಮಾಡಿದರು. ಈ 18ನೆಯ ಜನವರಿಯ ದಿವಸವು ಬ್ರಹ್ಮಾಬಾಬಾರವರ ಸಂಪೂರ್ಣ ನಷ್ಟೋಮೋಹ ಸ್ಮೃತಿಸ್ವರೂಪದ ದಿನವಾಗಿತ್ತು. ಹೇಗೆ ಗೀತೆಯ 18 ಅಧ್ಯಾಯದ ಸಾರವು - ಭಗವಂತನು ಅರ್ಜುನನ್ನು ನಷ್ಟಮೋಹ ಸ್ಮೃತಿಸ್ವರೂಪನನ್ನಾಗಿ ಮಾಡಿದನು ಎಂಬುದಾಗಿದೆಯೋ ಹಾಗೆಯೇ ಈ 18ನೆಯ ಜನವರಿಯ ಆಚರಣೆಯು ಸ್ಮೃತಿಚಿಹ್ನೆಯಾಗಿದೆ. ಬ್ರಹ್ಮಾಬಾಬಾರವರು ಎಷ್ಟು ಮಕ್ಕಳ ಬಗ್ಗೆ ಅತಿ ಸೇಹಿಯಾಗಿದ್ದರೆಂದರೆ ಸದಾ ಸೇವೆಯ ನಿಮಿತ್ತ ಮಕ್ಕಳನ್ನು ಎಷ್ಟು ನೆನಪು ಮಾಡುತ್ತಿದ್ದರು ಎಂಬುದು ಅನುಭವವಿದೆಯಲ್ಲವೇ. ಮೋಹವು ಇರಲಿಲ್ಲ. ಆದರೆ ಹೃದಯದ ಆಂತರಿಕ ಪ್ರೀತಿಯಿತ್ತು. ಏಕೆಂದರೆ ಮೋಹವೆಂದು ಯಾವುದಕ್ಕೆ ಹೇಳಲಾಗುತ್ತದೆಯೆಂದರೆ ಯಾವುದರಲ್ಲಿ ತಮ್ಮ ಸ್ವಾರ್ಥವಿರುತ್ತದೆಯೋ ಅದನ್ನು ಆದರೆ ಬ್ರಹ್ಮಾಬಾಬಾರವರಿಗೆ ತಮ್ಮ ಸ್ವಾರ್ಥವಿರಲಿಲ್ಲ. ಆದರೆ ಮಕ್ಕಳಲ್ಲಿ ಸೇವಾರ್ಥವಾಗಿ ಅತಿ ಸ್ನೇಹವಿತ್ತು. ಆದರೂ ಸಹ ಸದಾ ಜೊತೆಯಲ್ಲಿರುತ್ತಾ. ಮಕ್ಕಳನ್ನು ಎದುರಿನಲ್ಲಿ ನೋಡುತ್ತಾ ಇದ್ದರೂ ಸಹ ದೇಹದ ರೂಪದಲ್ಲಿ ನೆನಪು ಕಾಡಿಸಲಿಲ್ಲ. ಸಂಪೂರ್ಣ ಅನಾಸಕ್ತ ಹಾಗೂ ಪ್ರಿಯರಾಗಿದ್ದರು. ಆದ್ದರಿಂದ ನಷ್ಟೋ ಮೋಹಸ್ಮೃತಿಸ್ವರೂಪ ಎಂದು ಹೇಳಲಾಗುತ್ತದೆ. ನನ್ನದು, ನನ್ನವರು ಎನ್ನುವುದು ಯಾವುದೂ ಇರಲಿಲ್ಲ. ದೇಹ ಅಭಿಮಾನದಿಂದಲೂ ಸಹ ನಷ್ಟೋಮೋಹ ಆಗಿದ್ದರು. ಆದ್ದರಿಂದ ಈ ದಿವಸವು ತಂದೆಯನ್ನು ಅನುಸರಿಸಿರಿ (ಫಾಲೋ ಫಾದರ್) ಎನ್ನುವ ಪಾಠವನ್ನು ಕಲಿಸಿಕೊಡುವ ದಿವಸವಾಗಿತ್ತು.

ಈ ಅವ್ಯಕ್ತ ದಿವಸವು ಪ್ರಪಂಚದ ಅಜ್ಞಾನಿ ಆತ್ಮರನ್ನು ಪರಮಾತ್ಮನ ಕಾರ್ಯದ ಕಡೆಗೆ ಮಣಿಸುವ ದಿವಸವಾಗಿತ್ತು. ಏಕೆಂದರೆ ಮೆಜಾರಿಟಿ ಜನರು ಬ್ರಹ್ಮಾಬಾಬಾರವರನ್ನು ನೋಡಿ ಏನು ವಿಚಾರ ಮಾಡುತ್ತಿದ್ದರು ಹಾಗೂ

ತಿಳಿದುಕೊಂಡಿದ್ದರೆಂದರೆ, ಇವರ ಪರಮಾತ್ಮನು ಬ್ರಹ್ಮಾ ಆಗಿದ್ದಾರೆ ಎಂದು ಈ ಬ್ರಹ್ಮಾಕುಮಾರಿಯರು ಬ್ರಹ್ಮಾರನ್ನೇ ಭಗವಂತನೆಂದು ನಂಬಿದ್ದಾರೆಂದು ತಿಳಿದುಕೊಂಡಿದ್ದರು. ಆದರೆ ಬ್ರಹ್ಮಾರವರು ಸಾಕಾರದಲ್ಲಿ ಪಾತ್ರವನ್ನು ಪರಿವರ್ತನೆ ಮಾಡಿದ್ದರಿಂದ ಏನು ವಿಚಾರ ಮಾಡತೊಡಗಿದರೆಂದರೆ ಈಗಂತೂ ಬ್ರಹ್ಮಾಕುಮಾರಿಯರ ಭಗವಂತನೂ ಹೊರಟು ಹೋದರು ಹಾಗೂ ಈ ಬ್ರಹ್ಮಾಕುಮಾರಿಯರ ಕಾರ್ಯವು ಇಂದಿಲ್ಲದಿದ್ದರೂ ನಾಳೆ ಸಮಾಪ್ತಿಯಾಗಿ ಬಿಡುವುದು ಎಂದು ತಿಳಿದುಕೊಂಡಿದ್ದರು. ಆದರೆ ಇವರ ಕರ್ತವ್ಯವನ್ನು ಬ್ರಹ್ಮಾರವರ ಮೂಲಕವೂ ಮಾಡಿಸುವವರು ಪರಮಾತ್ಮನಾಗಿದ್ದರು. ಈಗಲೂ ಆಗಿದ್ದಾರೆ ಹಾಗೂ ಅಂತ್ಯದವರೆಗೂ ಆಗಿರುವರು ಎಂಬುದನ್ನು ನೀವು ತಿಳಿದುಕೊಂಡಿದ್ದೀರಿ. ಹೀಗೆ ಇದು ಪರಮಾತ್ಮನ ಕಾರ್ಯವಾಗಿದೆ. ವ್ಯಕ್ತಿಯ ಕಾರ್ಯವಲ್ಲ ಬ್ರಹ್ಮಾಬಾಬಾರವರ ಸಾಕಾರ ಪಾತ್ರವು ಪರಿವರ್ತನೆ ಆದ ನಂತರ ಏನು ಅರಿವು ಮೂಡಿದೆಯೆಂದರೆ ಇವರನ್ನು ಯಾವುದೋ ಶಕ್ತಿಯು ನಡೆಸುತ್ತಾ ಇದೆ ಎಂದು. ಈಗಲೂ ಸಹ ಬಡಪಾಯಿಗಳು ಪರಮಾತ್ಮನನ್ನು ಅರಿತುಕೊಂಡಿಲ್ಲ. ಆದರೆ ಯಾವುದೋ ಶಕ್ತಿಯು ಕಾರ್ಯವನ್ನು ಮಾಡಿಸುತ್ತಾ ಇದೆ. ಆ ಶಕ್ತಿಯು ಯಾವುದಾಗಿದೆ ಎಂಬುದನ್ನು ವಿಚಾರ ಮಾಡುತ್ತಾ ಇದ್ದಾರೆ. ನೋಡುತ್ತಾ ಇದ್ದಾರೆ. ವಿಚಾರ ಮಾಡುತ್ತಾ ಇದ್ದಾರೆ ಹಾಗೂ ಕೊನೆಯಲ್ಲಿಯಂತೂ ತಿಳಿದುಕೊಂಡೇ ತಿಳಿದುಕೊಳ್ಳಲಿದ್ದಾರೆ. ಹಾಗಾದರೆ ಯಾರ ಕಾರ್ಯವಾಗಿದೆ?

ನೀವು ಹೇಳುತ್ತೀರಿ - ಯಾವ ಮಕ್ಕಳು ಸಾಕಾರ ಬ್ರಹ್ಮಾರವರ ಪಾತ್ರದ ನಂತರ ಬಂದಿದ್ದಾರೋ ಅವರು ಏನು ಯೋಚಿಸುತ್ತಾರೆಂದರೆ - ಬ್ರಹ್ಮಾಬಾಬಾರವರು ತಮ್ಮ ಸಾಕಾರ ಪಾತ್ರವನ್ನು ಇಷ್ಟು ಬೇಗನೆ ಏಕೆ ಪೂರ್ತಿ ಮಾಡಿದರು? ಎಂದು. ನಾವೂ ನೋಡುತ್ತಿದ್ದೆವು, ನಾವೂ ಮಿಲನ ಮಾಡುತ್ತಿದ್ದೆವಲ್ಲವೇ ಹೀಗೆ ಯೋಚಿಸುತ್ತೀರಲ್ಲವೇ? ಕಲ್ಪದ ಹಿಂದಿನ ವರ್ಣನೆಯೂ ಏನಿದೆಯೆಂದರೆ ಕೌರವ ಸೈನ್ಯದ ನಿಮಿತ್ತರಾಗಿದ್ದ ಮಹಾವೀರನ ಕಲ್ಯಾಣವು ಯಾರ ಮೂಲಕ ಆಯಿತು? ಶಕ್ತಿಯರ ಮೂಲಕ ಆಯಿತಲ್ಲವೇ, ಆದ್ದರಿಂದ ಶಕ್ತಿಯರ ಪಾತ್ರವು ವಿಶ್ವನಾಟಕದಲ್ಲಿ ಸಾಕಾರ ರೂಪದಲ್ಲಿ ಪೂರ್ವ ನಿಶ್ಚಿತವಾಗಿದೆ. ಹಾಗೂ ಎಲ್ಲರೂ ಏನು ಒಪ್ಪಿಕೊಂಡೇ ಒಪ್ಪಿಕೊಳ್ಳುತ್ತಾರೆಂದರೆ ಮಾತೃಶಕ್ತಿಯ ಹೊರತು ಈ ವಿಶ್ವದ ಕಲ್ಯಾಣವು ಆಗುವುದು ಅಸಂಭವವಾಗಿದೆಯೆಂದು ಹಾಗಾದರೆ ಬ್ರಹ್ಮಾಬಾಬಾರವರು ಏಕೆ ಫರಿಶ್ತೆಯಾದರು? ಸಾಕಾರ ಪಾತ್ರವು ಏಕೆ ಪರಿವರ್ತನೆಯಾಯಿತು? ಒಂದುವೇಳೆ ಬ್ರಹ್ಮಾಬಾಬಾರವರು ಫರಿಶ್ತಾ ರೂಪವನ್ನು ಧಾರಣೆ ಮಾಡದಿದ್ದರೆ ನೀವು ಇಷ್ಟೊಂದು ಆತ್ಮರು ಇಲ್ಲಿಗೆ ಬರಲು ಸಾಧ್ಯವಾಗುತ್ತಿರಲಿಲ್ಲ. ಏಕೆಂದರೆ ವಾಯುಮಂಡಲದ ಭ್ರಾಂತಿಗಳು ಈ ವಿಶ್ವಕ್ರಾಂತಿಯ ಕಾರ್ಯವನ್ನು ಹಗುರ ಮಾಡುತ್ತಾ ಇದ್ದವು ಆದ್ದರಿಂದ ಬ್ರಹ್ಮಾಬಾಬಾರವರು ಫರಿಶ್ತೆ ಆಗಿದ್ದು ನಿಮ್ಮಲ್ಲಿ ಅತಿ ಹೆಚ್ಚಿನ ಸಂಖ್ಯೆಯ ಮಕ್ಕಳ ಭಾಗ್ಯವು ತೆರೆಯುವ ಕಾರಣವಾಗಿತ್ತು. ಈಗ ಫರಿಶ್ತೆ ರೂಪದಲ್ಲಿರುವ ಸೇವೆಯ ತೀವ್ರಗತಿಯನ್ನು ನೋಡುತ್ತಾ ಇದ್ದೀರಲ್ಲವೇ. ನೋಡುತ್ತಿದ್ದೀರಾ? ತೀವ್ರಗತಿಯಾಯಿತೋ ಅಥವಾ ಕಡಿಮೆಯಾಯಿತೋ ತೀವ್ರಗತಿಯಾಯಿತಲ್ಲವೇ. ಹೀಗೆ ತೀವ್ರಗತಿಯಾಗಿದ್ದರಿಂದಲೇ ನೀವು ಇಲ್ಲಿಗೆ ಬಂದಿದ್ದೀರಿ. ಇಲ್ಲದಿದ್ದರೆ ಚೆನ್ನಾಗಿ ನಿದ್ದೆ ಮಾಡುತ್ತಾ ಇದ್ದಿರಿ ಆದ್ದರಿಂದ ಇಂದಿನ ದಿನವು ಸಾಮಾನ್ಯ ಜನರು ಆಚರಣೆ ಮಾಡುವುದರ ಸಮಾನ ದಿನವಲ್ಲ. ಹೊರಟು ಹೋದರು, ಹೊರಟು ಹೋದರು ಎಂದು ಅವರು ಹೇಳುತ್ತಾರಲ್ಲವೇ. ಆದರೆ ಫಾಲೋ ಫಾದರ್ (ತಂದೆಯನ್ನು

ಅನುಸರಿಸಲು) ನಾವೂ ಸಹ ಹೀಗೆ ನಷ್ಟೋಮೋಹ ಸ್ಮೃತಿಸ್ವರೂಪರು ಆಗಬೇಕೆಂಬ ಉತ್ಸಾಹ-ಉಲ್ಲಾಸವು ನಿಮಗೆ ಬರುತ್ತದೆ. ಈ ಪ್ರತ್ಯಕ್ಷ (ಜೀವನದಲ್ಲಿ ಆಚರಣೆಯಲ್ಲಿ ತರಬೇಕಾದ) ಪಾಠವನ್ನು ಕಲಿಯುವ ದಿವಸವಾಗಿದೆ.

ಈ ದಿನ ಯಾರದಾದರೂ ಮನಸ್ಸಿನಿಂದ ದುಃಖದ ಕಂಬನಿಯು ಬಂದಿತೇ? ಕಂಬನಿಯು ಹರಿಯಿತೋ ಅಥವಾ ಒಳಗೊಳೊಗೇ ಸ್ವಲ್ಪ ಬಂದಿತೋ, ಇಲ್ಲವೇ. ಒಬ್ಬರಿಬ್ಬರದು ಕಣ್ಣೀರು ಸುರಿಯಿತೇ. ಯಾರಿಗೆ ದುಃಖದ ಸ್ವಲ್ಪವಾದರೂ ಅಲೆಯು ಬಂದಿತೋ ಅವರು ಕೈ ಎತ್ತಿರಿ, ದುಃಖವಾಯಿತೇ? ಅಗಲಿಲ್ಲವೇ? ಇಂದಿನ ದಿನವಂತೂ ಬ್ರಹ್ಮಾಬಾಬಾರವರಿಗೆ ಸೇವೆಯ ಸಾಥಿಯಾಗುವ ದಿನವಾಗಿದೆ ನೀವೆಲ್ಲರೂ ಸಾಥಿಯಾಗಿದ್ದೀರಾ? ಅಥವಾ ಸಾಕ್ಷಿಯಾಗಿದ್ದೀರೋ? ಸೇವೆಯಲ್ಲಿ ಸಾಥಿಯಾಗಿರಿ ಹಾಗೂ ಮಾಯೆಯ ಪರಿಸ್ಥಿತಿಗಳೊಂದಿಗೆ ಸಾಕ್ಷಿ ಆಗಿರಿ. ಮಾಯೆಯನ್ನಂತೂ ಸ್ವಾಗತ ಮಾಡಿದ್ದೀರಲ್ಲವೇ ಅಥವಾ ಗಾಬರಿಯಾಗುತ್ತೀರೋ ಅಯ್ಯೋ ಏನಾಗಿಬಿಟ್ಟಿತು ಎಂದು ಸ್ವಲ್ಪ, ಸ್ವಲ್ಪ ಗಾಬರಿಯಾಗುತ್ತೀರಾ, ಯಾವಾಗಲಾದರೂ ಮಾಯೆಯು ಯಾವುದಾದರೂ ವಿಕರಾಳ(ವಿರಾಟ) ರೂಪದಲ್ಲಿಯೂ ಬರಬಹುದು ಏಕೆಂದರೆ ಹಗುರ ಹಗುರ ರೂಪಗಳನ್ನಂತೂ ನೀವೂ ಸಹ ತಿಳಿದುಕೊಂಡುಬಿಟ್ಟಿದ್ದೀರಿ. ಹಾಗೂ ಮಾಯೆಯು ಸಹ ಏನು ಯೋಚಿಸುತ್ತದೆಯೆಂದರೆ ಇವರೂ ತಿಳಿದುಕೊಂಡುಬಿಟ್ಟಿದ್ದಾರೆಂದು ಆದರೆ ಯಾವುದಾದರೂ ಭಯಂಕರ ರೂಪದ ಮಾಯೆಯು ಬಂದರೆ ಸದಾ ನಿಮ್ಮನ್ನು ನೀವು ಕುಸ್ತಿಯ ಆಟ ಆಡುತ್ತಾ ಇದ್ದೇನೆ ಎಂದು ತಿಳಿದುಕೊಳ್ಳಿರಿ ಕುಸ್ತಿಯ ಆಟವನ್ನು ನೋಡಿದ್ದೀರಾ? ಅಥವಾ ತೋರಿಸೋಣವೋ? ಇಲ್ಲಿ ಮಕ್ಕಳು ಕುಸ್ತಿ ಮಾಡಿ ತೋರಿಸುತ್ತಾರಲ್ಲವೇ. ಆದ್ದರಿಂದ ನಾನು ಈ ಕುಸ್ತಿಯ ಆಟವನ್ನು ಆಡುತ್ತಾ ಇದ್ದೇನೆ. ಎಂದು ತಿಳಿದುಕೊಳ್ಳಿರಿ. ಚೆನ್ನಾಗಿ ಮಾಯೆಯನ್ನು ಹೊಡೆಯಿರಿ. ಗಾಬರಿಯಾಗಬೇಡಿರಿ, ಏಕೆಂದರೆ ಆಟವಾಗಿದೆ. ಹೀಗೆ ಸಾಕ್ಷಿಯಾಗಿ ಆಟವಾಡುವುದರಲ್ಲಿ ಮೋಜು ಅನುಭವವಾಗುತ್ತದೆ. ಹಾಗೂ ಮಾಯೆಯು ಬಂದು ಬಿಟ್ಟಿತು, ಮಾಯೆಯು ಬಂದು ಬಿಟ್ಟಿತು ಎಂದುಕೊಂಡರೆ ಗಾಬರಿಯಾಗಿ ಬಿಡುತ್ತೀರಿ. ಮಾಯೆಯಲ್ಲಿ ಈಗ ಏನೂ ಶಕ್ತಿಯಿಲ್ಲ, ಕೇವಲ ಬಾಹ್ಯದ ಸಿಂಹದ ರೂಪವಿದೆ. ಆದರೆ ಅದು ಬೆಕ್ಕೂ ಸಹ ಆಗಿಲ್ಲ. ಕೇವಲ ನಿಮ್ಮನ್ನು ಗಾಬರಿಗೊಳಿಸುವ ಸಲುವಾಗಿ ದೊಡ್ಡ ರೂಪವನ್ನು ಧರಿಸಿಬಿಡುತ್ತದೆ. ಏನಾಗುತ್ತದೆಯೋ ಎಂಬ ಗಾಬರಿಯುಂಟು ಮಾಡುತ್ತದೆ. ಬಾಪ್‌ದಾದಾರವರು ಮುಂದೆಯೂ ಸಹ ಪಾಠವನ್ನು ಕಲಿಸಿಕೊಟ್ಟಿದ್ದಾರೆ - ಏನಾಗುವುದೋ ಎಂದು ಎಂದೂ ಕೇಳಬೇಡಿರಿ. ಏನು ಮಾಡಲಿ ಹೇಗೆ ಆಗುವುದೋ, ಏನಾಗುವುದೋ ಎಂದು ಎಂದೂ ಹೇಳಬೇಡಿರಿ. ಏನು ಮಾಡಲಿ ಹೇಗೆ ಆಗುವುದೋ, ಏನಾಗುವುದೋ ಎಂದು ವಿಚಲಿತರಾಗಬೇಡಿರಿ. ಏನು ಪಾಠವನ್ನು ಕಲಿಸಿಕೊಟ್ಟಿದ್ದಾರೆ? ಏನು ಆಗುತ್ತಾ ಇದೆಯೋ ಅದು ಒಳ್ಳೆಯದಾಗಿದೆ ಹಾಗೂ ಏನು ಮುಂದೆ ಆಗುವುದಿದೆಯೋ ಅದು ಇನ್ನೂ ಒಳ್ಳೆಯದಾಗಿರುತ್ತದೆ. ಬ್ರಾಹ್ಮಣರಾಗುವುದು ಅರ್ಥಾತ್ ಒಳ್ಳೆಯದೇ, ಒಳ್ಳೆಯದು ಕಾದಿದೆಯೆಂದು ತಿಳಿಯಿರಿ. ಎಂತಹ ಘಟನೆಗಳು ಆಗಬಹುದೆಂದರೆ. ಎಂದೂ ನಿಮ್ಮ ಸ್ವಪ್ನದಲ್ಲಿಯೂ ಇರುವುದಿಲ್ಲ ಹಾಗೂ ಅನೇಕ ಸಂಗತಿ(ವಿಷಯ)ಗಳು ಎಂತಹವು ಆಗುತ್ತವೆಯೆಂದರೆ ಅಜ್ಞಾನಕಾಲದಲ್ಲಿಯೂ ಸಹ ಆಗಿರುವುದಿಲ್ಲ. ಆದರೆ ಜ್ಞಾನದಲ್ಲಿ ಬಂದನಂತರ ಆಗಿಬಿಟ್ಟಿತು. ಅಜ್ಞಾನದ ಕಾಲದಲ್ಲಿ ಎಂದೂ ವ್ಯಾಪಾರವು ಏರು-ಪೇರು ಆಗಿರದಿರಬಹುದು. ಹಾಗೂ ಜ್ಞಾನದಲ್ಲಿ ಬಂದನಂತರ ಆಗಿಬಿಟ್ಟಿದ್ದದಿಂದ ಗಾಬರಿಯಾಗಿಬಿಡುತ್ತಾರೆ. ಅಯ್ಯೋ ಜ್ಞಾನವನ್ನು ಬಿಟ್ಟು ಬಿಡಲೆ ಎನ್ನಿಸಬಹುದು ಆದರೆ ಯಾವುದಾದರೂ ಪರಿಸ್ಥಿತಿಯು

ಬಂದರೆ ಆ ಪರಿಸ್ಥಿತಿಯನ್ನು ಸ್ವಲ್ಪ ಸಮಯದವರೆಗೆ ನಿಮ್ಮ ಶಿಕ್ಷಕನೆಂದು ತಿಳಿದುಕೊಳ್ಳಿರಿ. ಶಿಕ್ಷಕನು ಶಿಕ್ಷಣ ಕೊಡುತ್ತಾನಲ್ಲವೇ ಹಾಗೆಯೇ ಪರಿಸ್ಥಿತಿಯು ನಿಮಗೆ ಸಹನಶಕ್ತಿ, ಅತೀತಶಕ್ತಿ, ನಷ್ಟೋಮೋಹ ಹಾಗೂ ಎರಡನೆಯದಾಗಿ ಎದುರಿಸಿ ಹೋರಾಡುವ ಶಕ್ತಿಯ ಪಾಠವನ್ನು ಕಲಿಸಿಕೊಡುತ್ತದೆ. ಇನ್ನೂ ಮುಂದೆ ಕೂಡಾ ನೀವು ಕಲಿತುಕೊಳ್ಳಿರೆಂದು ಈ ಪರಿಸ್ಥಿತಿಯು ಈ ಎರಡು ಸಹನೆ ಶಕ್ತಿ ಹಾಗೂ ಎದುರಿಸಿ, ಹೋರಾಡುವ ಶಕ್ತಿಯ ಪಾಠಗಳನ್ನು ಕಲಿಸಿಕೊಡುವ ಸಲುವಾಗಿ ಬಂದಿವೆ ಹಾಗೂ ನಾನಂತೂ ನಿಮಿತ್ತವಾಗಿದ್ದೇನೆ. ನನ್ನದು ಏನೂ ಇಲ್ಲ ಎಂದು  ಹೇಳುತ್ತೀರೋ, ಹೇಳುತ್ತೀರಲ್ಲವೇ? ಮೋಸ ಮಾಡಲು ಹೇಳುವುದಿಲ್ಲ ತಾನೇ ಮನಃಪೂರ್ವಕವಾಗಿ ಹೇಳುತ್ತೀರಾ? ನಿಮಿತ್ತ(ಟ್ರಸ್ಟಿ)ಆಗಿದ್ದೀರೋ ಅಥವಾ ಸ್ವಲ್ಪ ಗೃಹಸ್ಥ ಆಗಿದ್ದೀರೋ? ಒಮ್ಮೊಮ್ಮೆ ಗೃಹಸ್ಥ ಒಮ್ಮೊಮ್ಮೆ ನಿಮಿತ್ತ ಆಗಿಬಿಡುತ್ತೀರಾ?

ಹೊಸ ವರ್ಷದ ದಿನದ ಸಂದರ್ಭದಲ್ಲಿ ಬಾಪ್‌ದಾದಾರವರಿಗೆ ಮೂರು ನಾಲ್ಕು ಆಟದ ವಸ್ತುಗಳನ್ನು ಮಕ್ಕಳು ಕೊಟ್ಟಿದ್ದರು. ಅದರಲ್ಲಿ ಏನಿತ್ತೆಂದರೆ ಒಂದು ಆಟಿಗೆಯು ಈಕಡೆ ತಿರುಗಿಸಿದರೆ ಪುರುಷನಾಗುತ್ತದೆ. ಆ ಕಡೆಗೆ ತಿರುಗಿಸಿದರೆ ಸ್ತ್ರೀಯಾಗಿ ಬಿಡುತ್ತದೆ. ಒಂದೇ ಆಟದ ವಸ್ತುವು ಬದಲಾವಣೆಯಾಗಿ ಬಿಡುತ್ತದೆ ನೀವು ಅಂತಹ ಆಟದ ವಸ್ತುವೇನೂ ಆಗಿಲ್ಲ ತಾನೇ? ಒಂದುವೇಳೆ ಆ ಆಟಗೆಯು ಇದ್ದರೆ ಇವರಿಗೆ ತೋರಿಸಿರಿ. ಈಗತಾನೇ ಗೃಹಸ್ಥನಾಗಿರುವವರು ಇದೀಗಲೇ ನಿಮಿತ್ತ ಆಗಿಬಿಡುವುದಿಲ್ಲ ತಾನೇ. ನೀವು ಇಂತಹವರಲ್ಲ ತಾನೇ  ಒಮ್ಮೊಮ್ಮೆ ಹೀಗೆ ಆಗಿಬಿಡುತ್ತದೆಯೇ? ಗಾಬರಿಯಾಗಿಬಿಟ್ಟರೆ ಇವರು ಗಾಬರಿಯಾಗಿಬಿಟ್ಟಿದ್ದಾರೆಂದು ಮಾಯೆಯೂ ಸಹ ತಿಳಿದುಕೊಂಡು ಬಿಡುತ್ತದೆ ಆದ್ದರಿಂದ ಗಾಬರಿಯಾಗಬೇಡಿರಿ ಮಾಯೆಗೆ ಚೆನ್ನಾಗಿ ಗುಂಡು ಹೊಡೆಯಿರಿ. ನಿಮಿತ್ತ ಎಂದರೆ ಎಲ್ಲವನ್ನೂ ತಂದೆಗೆ ಸಮರ್ಪಣೆ ಮಾಡಿಬಿಟ್ಟಿದ್ದೀರಿ. ನನ್ನ ಗತಿಯು ಏನಾಗುತ್ತದೆಯೋ, ಹೀಗೆ ವ್ಯರ್ಥ ಸಂಕಲ್ಪಗಳು ಬರುತ್ತಿದ್ದರೆ ಗಡಿಬಿಡಿಯಾಗುತ್ತದೆ. ಎಲ್ಲವೂ ಒಳ್ಳೆಯದಾಗಿದೆ ಹಾಗೂ ಒಳ್ಳೆಯದೇ ಆಗುತ್ತದೆ ಎಂದು  ನಿಶ್ಚಿಂತರಾಗಿರಿ ಇದನ್ನು ಸಮರ್ಥ ಸ್ವರೂಪವೆಂದು ಕರೆಯಲಾಗುತ್ತದೆ ಹಾಗಾದರೆ ಇಂದಿನ ದಿನವು ಯಾವುದಾಗಿದೆ? ಸಮರ್ಥ, ನಷ್ಟೋಮೋಹ ಆಗುವ ದಿನವಾಗಿದೆ. ಕೇವಲ ಬಾಬಾ, ನೀವು ತುಂಬಾ ನೆನಪಿಗೆ ಬಂದಿರಿ ಎನ್ನುವ ಗೀತೆ ಹಾಡುವುದಲ್ಲ ಆದ್ದರಿಂದ ಬ್ರಹ್ಮಾಬಾಬಾರವರು ಫರಿಶ್ತಾ ಸ್ವರೂಪ ಆಗುವುದು ವಿಶ್ವನಾಟಕದಲ್ಲಿ ಪರಮಾತ್ಮನ ಕಾರ್ಯವನ್ನು ಪ್ರತ್ಯಕ್ಷ ಮಾಡಲು ನಿಮಿತ್ತವಾಯಿತು. ಬ್ರಹ್ಮಾಬಾಬಾರವರು ಇದ್ದಾರೆಯೇ, ಅಥವಾ ಇಲ್ಲವೋ? ಕಣ್ಣಿಗಂತೂ ಕಾಣುವುದಿಲ್ಲ.

ಯಾರು ಕೊನೆಯಲ್ಲಿ ಬಂದಿದ್ದೀರೋ ಅವರು ತುಂಬಾ ಅದೃಷ್ಟಶಾಲಿಯಾಗಿದ್ದೀರಿ. ಏಕೆ? ಈಗ ಸೇವೆಯ ರಚನೆಯಾಗಿ  ಸಾಧನೆಗಳು ಲಭಿಸುವ  ಸಮಯದಲ್ಲಿ ಬಂದಿದ್ದೀರಿ. 60 ವರ್ಷದಿಂದ ಜ್ಞಾನದಲ್ಲಿ ಇರುವವರು ಬೆಣ್ಣೆಯನ್ನು ತೆಗೆದರು ಹಾಗೂ ಬೆಣ್ಣೆಯನ್ನು ತಿನ್ನುವವರು ನೀವು ಬಂದುಬಿಟ್ಟಿದ್ದೀರಿ. ಈ ದಿನ ಚರಿತ್ರೆಯನ್ನು ನೀವು ಕೇಳಿರಬಹುದಲ್ಲವೇ ನೀವು ಇಷ್ಟೊಂದು ಪರಿಶ್ರಮ ಮಾಡಿದರೂ ಓಡಿ ಹೋಗಿಬಿಡುತ್ತಾರೆ. ಹಾಗೂ ವರ್ತಮಾನ ಸಮಯದಲ್ಲಿ ಸೇವೆಯ ವಾಯುಮಂಡಲವು ನಿರ್ಮಾಣವಾಗಿದೆ ಈಗ ಪ್ರೆಸಿಡೆಂಟ್ (ರಾಷ್ಟ್ರಪತಿ) ಮತ್ತು ಪ್ರೈಮ್ ಮಿನಿಸ್ಟರ್ (ಪ್ರಧಾನ ಮಂತ್ರಿ) ಆಗಿರಲಿ, ಮುಖಂಡರು ಯಾರೇ ಆಗಿರಲಿ ಮೆಜಾರಿಟಿ ಈ ಕಾರ್ಯವು ಉತ್ತಮವಾಗಿದೆ ಎಂದು ಒಪ್ಪಿಕೊಳ್ಳುತ್ತಾರಲ್ಲವೇ ನಾನು ಮಾಡಬಲ್ಲೆನೋ ಅಥವಾ ಇಲ್ಲವೋ ಎನ್ನುವುದು ಅನ್ಯ ವಿಚಾರವಾಗಿದೆ. ಪ್ರತಿಯೊಬ್ಬರ ಪಾತ್ರವೂ ತಮ್ಮ ತಮ್ಮದು

ಬೇರೆ ಬೇರೆ ಇದೆ. ಆದರೆ ಉತ್ತಮ ಕಾರ್ಯವಾಗಿದೆ ಹಾಗೂ ಈ ಕಾರ್ಯವು ಇನ್ನೂ ವೃದ್ಧಿಯಾಗಬೇಕು ಎನ್ನುವುದನ್ನಂತೂ ಹೇಳುತ್ತಾರಲ್ಲವೇ. ಮುಂಚೆ ಏನು ಹೇಳುತ್ತಿದ್ದರು. ಬ್ರಹ್ಮಾಕುಮಾರಿಯರ ಮುಖವನ್ನೂ ನೋಡಬೇಡಿರಿ ಎಂದು ಹೇಳುತ್ತಿದ್ದರು. ಆಮಂತ್ರಣ ನೀಡಲು ಹೋದರೂ ಬಾಗಿಲನ್ನು ಮುಚ್ಚಿಬಿಡುತ್ತಿದ್ದರು ಆದರೆ ನೀವಂತೂ ತುಂಬಾ ಒಳ್ಳೆಯ ಸಮಯದಲ್ಲಿ ಬಂದಿದ್ದೀರಲ್ಲವೇ. ಸೇವೆ ಮಾಡಲು ತುಂಬಾ ಅವಕಾಶವಿದೆ. ನೀವು ಎಷ್ಟು ಸೇವೆ ಮಾಡಬೇಕೆಂದು ಬಯಸಿದರೂ ಅಷ್ಟೂ ಮಾಡಲು ಸಾಧ್ಯವಿದೆ. ಈಗ ಎಲ್ಲರೂ ಏನು ತಿಳಿದುಕೊಂಡಿದ್ದಾರೆಂದರೆ - ಸಾಕಾರ ಬ್ರಹ್ಮಾರ ನಂತರವೂ ಬ್ರಹ್ಮಾಕುಮಾರಿಯರು ಸಿಲ್ವರ್ ಜೂಬ್ಲಿಯನ್ನು ಆಚರಿಸಿಬಿಟ್ಟರು, ಗೋಲ್ಡನ್ ಜೂಬ್ಲಿಯನ್ನೂ ಆಚರಿಸಿಬಿಟ್ಟರು, ಈಗ ಡೈಮಂಡ್ ಜೂಬ್ಲಿಯವರೆಗೆ ಬಂದುಬಿಟ್ಟಿದ್ದಾರೆ ಎಂದು, ಏಕೆಂದರೆ ಯಾರಾದರೂ ದೊಡ್ಡ ಗುರುವು ಹೋಗಿಬಿಟ್ಟರೆ ಸಂಸ್ಥೆಯಲ್ಲಿ ಗಡಿಬಿಡಿಯಾಗಿ ಬಿಡುತ್ತದೆ. ಇಲ್ಲಿ ಗಡಿಬಿಡಿಯಿದೆಯೇನು? ಇಲ್ಲಿ ಇನ್ನೂ ವೃದ್ಧಿಯಾಗುತ್ತಾ ಹೋಗುತ್ತಿದೆ ಆದ್ದರಿಂದ ಇದರಿಂದ ಏನು ಸಿದ್ಧವಾಗುತ್ತದೆಯೆಂದರೆ, ಈ ಕಾರ್ಯವನ್ನು ಮಾಡಿಸುವವರು ಪರಮಪಿತ ಪರಮಾತ್ಮ ಆಗಿದ್ದಾರೆ. ನಿಮಿತ್ತರಾದ ಮಾಧ್ಯಮ ಬ್ರಹ್ಮಾಬಾಬಾರವರಾಗಿದ್ದಾರೆ. ಈ ಪಾತ್ರವು ಬೇರೆಯದಾಗಿದೆ ಆದರೆ ಮಾಧ್ಯಮ ಆಗಿರುವವರು ವಿಶ್ವನಾಟಕ(ಡ್ರಾಮಾ)ದಲ್ಲಿ ಮೊದಲು ಸಾಕಾರ ಬ್ರಹ್ಮಾ ಆಗಿದ್ದರು. ಹಾಗೂ ಈಗ ಫರಿಶ್ತಾ ರೂಪದಲ್ಲಿ ಬ್ರಹ್ಮಾ ಇದ್ದಾರೆ. ಬ್ರಹ್ಮಾರವರನ್ನು ಪಿತಾ ಎಂದೂ ಕರೆಯುತ್ತಾರೆ. ರಚನೆಕಾರನಂತೂ ಬ್ರಹ್ಮಾ ಆಗಿದ್ದಾರಲ್ಲವೇ. ಈ ಪಾತ್ರವಂತೂ ಮಧ್ಯ ಮಧ್ಯದಲ್ಲಿ ಮಕ್ಕಳ ಪಾಲನೆ ಮಾಡುವ ಸಲುವಾಗಿ ನಿಮಿತ್ತವಾಗಿದೆ ಆದರೆ ರಚನಕಾರನು ಬ್ರಹ್ಮಾ ಆಗಿದ್ದಾರೆ ಹಾಗೂ ರಚನೆಯ ಕಾರ್ಯದಲ್ಲಿ ಈಗಲೂ ಸಹ ಅಂತ್ಯದವರೆಗೆ ಬ್ರಹ್ಮಾರವರದೇ ಪಾತ್ರವಿದೆ.

ಇಂದು ಇಡೀ ದಿನದಲ್ಲಿ ಯಾರ ಬಳಿ ಮಾಯೆಯು ಬಂದಿತು? ಮಾಯೆಯು ಬಂದಿತೇ? ಬರಲಿಲ್ಲವೇ? ಮೊಮ್ಮಕ್ಕಳು, ಮರಿಮಕ್ಕಳು ಯಾರೂ ನೆನಪಿಗೆ ಬರಲಿಲ್ಲವೇ? ಆದ್ದರಿಂದ ಹೀಗೆ ಸದಾ ಸಮರ್ಥರಾಗಿ ಇರಿ ಹಾಗೂ ಇದರ ಎಲ್ಲದಕ್ಕಿಂತಲೂ ಸಹಜವಾದ ವಿಧಿಯನ್ನು ಎರಡು ಶಬ್ದಗಳಲ್ಲಿ ನೆನಪಿಟ್ಟುಕೊಳ್ಳಿರಿ. ಎರಡು ಶಬ್ದಗಳನ್ನು ನೆನಪಿಟ್ಟುಕೊಳ್ಳಬಲ್ಲಿರಲ್ಲವೇ? ಇಡೀ ಮುರಳಿಯು ಮರೆತು ಹೋದರೂ ಎರಡು ಶಬ್ದಗಳನ್ನು ನೆನಪಿಟ್ಟುಕೊಳ್ಳಿರಿ. ಕಾರ್ಯರೂಪದಲ್ಲಿ ಆಚರಣೆಯಲ್ಲಿ ತರುತ್ತಾ ಹೋಗಿರಿ ಶಬ್ಧಗಳನ್ನು ತಿಳಿದುಕೊಂಡಿದ್ದೀರಿ. ಹೊಸ ವಿಷಯವೇನಲ್ಲ. ಒಂದು ಶುಭ ಚಿಂತನೆಯಾಗಿದೆ, ಎರಡು ನೆಗೆಟಿವ್ ಅನ್ನೂ (ನಕಾರಾತ್ಮಕವನ್ನೂ, ವಿಧ್ವಂಸಕವಾದುದನ್ನೂ ಪಾಸಿಟಿವ್ (ಸಕಾರಾತ್ಮಕ, ರಚನಾತ್ಮಕ) ಮಾಡಿಕೊಳ್ಳಿರಿ. ಇದನ್ನು ಶುಭಚಿಂತನೆ ಎಂದು ಕರೆಯಲಾಗುತ್ತದೆ... ನಕಾರಾತ್ಮಕವಾದುದು ಸಕಾರಾತ್ಮಕ ಆಗಲು ಸಾಧ್ಯವಿದೆ ಹಾಗೂ ನೀವು ಪರಿವರ್ತನೆ ಮಾಡಬಹುದು. ಕೇವಲ ಏನು ಪರಿಶೀಲನೆ ಮಾಡಿಕೊಳ್ಳಿರೆಂದರೆ, ಶುಭಚಿಂತನೆಯು ಕರ್ಮ ಮಾಡುತ್ತಿದ್ದರೂ ನಡೆಯಿತೇ ಎಂಬುದನ್ನು ಹಾಗೂ ಎರಡನೆಯದಾಗಿ ಅನ್ಯರೆಲ್ಲರ ಬಗ್ಗೆಯೂ ಶುಭಚಿಂತಕರಾಗಿರಿ. ಹೀಗೆ ಶುಭ ಚಿಂತನೆ ಮಾಡುವುದು ಹಾಗೂ ಶುಭ ಚಿಂತಕರಾಗುವುದು ಇವೆರಡರ ಸಂಬಂಧವಿದೆ. ಒಂದುವೇಳೆ ಶುಭಚಿಂತನೆ ಇಲ್ಲದಿದ್ದರೆ ಶುಭಚಿಂತಕರೂ ಆಗಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಇವೆರಡು ನಿರ್ದೇಶನಗಳ ಬಗ್ಗೆ ಗಮನ ಇಟ್ಟುಕೊಳ್ಳಿರಿ. ತಿಳಿಯಿತೇ? ಏನು ಮಾಡುವಿರಿ? ಇದನ್ನು ಮರೆಯಬಾರದು. ಏಕೆಂದರೆ ಈಗ ಏನು ನೋಡಲಾಗುತ್ತಿದೆಯೆಂದರೆ, ಅನೇಕ ಎಂತಹ ಸಮಸ್ಯೆಗಳಿವೆಯೆಂದರೆ,

ಜನರಿದ್ದಾರೆಂದರೆ, ಅವರು ನಿಮ್ಮ ವಾಣಿಯಿಂದ ತಿಳಿದುಕೊಳ್ಳುವುದಿಲ್ಲ. ಆದರೆ ಶುಭಚಿಂತಕರಾಗಿ ಶುಭವಾದ ವೈಬ್ರೇಷನ್‌ಗಳನ್ನು ನೀಡಿದರೆ ಪರಿವರ್ತನೆ ಆಗಿಬಿಡುತ್ತಾರೆ. ಇನ್ನೊಂದು ವಿಚಾರವೇನಿದೆಯೆಂದರೆ, ಈ ಬ್ರಾಹ್ಮಣ ಜೀವನದಲ್ಲಿ ನೀವು ಮುಕ್ತರಾಗುವವರಿದ್ದೀರಲ್ಲವೇ... ಒಂಭತ್ತು ಲೋಪ ದೋಷಗಳಿಂದ ಮುಕ್ತರಾಗಬೇಕೆಂದು ನಿಮಗೆ ತಿಳಿವಳಿಕೆ ನೀಡಲಾಗಿದೆ ಹಾಗೂ ಒಂಭತ್ತು ವಿಶೇಷತೆಗಳಿಂದ ನವರತ್ನಗಳಲ್ಲಿ ನೀವು ಬರಲು ಸಾಧ್ಯವಾಗುತ್ತದೆ. ಒಂದುವೇಳೆ ಈ ಒಂಭತ್ತು ಅವಗುಣಗಳಿಂದ ಮುಕ್ತರಾಗಿಬಿಟ್ಟರೆ ನವರತ್ನಗಳಲ್ಲಿ ಒಬ್ಬರಾಗಬಹುದು. ಆದರೆ ಇಂದು ಬಾಪ್‌ದಾದಾರವರು ಒಂದು ವಿಚಾರದ ಸ್ಮೃತಿಯನ್ನು ತಂದುಕೊಡುತ್ತಾ ಇದ್ದಾರೆ ಎಂದಾದರೂ ಯಾವುದಾದರೂ ಶಾರೀರಕ ರೋಗವಿರಲಿ, ಮನಸ್ಸಿನ ಬಿರುಗಾಳಿಯಿರಲಿ, ಶರೀರದಲ್ಲಿ ಗೊದಲವಾಗಲೀ, ಕುಟುಂಬದಲ್ಲಿ ಗೊಂದಲ ಬಂದರೂ, ಸೇವೆಯಲ್ಲಿಯೂ ಮನಸ್ತಾಪವುಂಟಾದರೆ, ಯಾವುದಾದರೂ ಪ್ರಕಾರದ ಗಡಿಬಿಡಿಯಲ್ಲಿ ಎಂದೂ ವ್ಯಾಕುಲರಾಗಬೇಡಿರಿ(ಎದೆಯೊಡೆಯುವುದು). ವಿಶಾಲಹೃದಯವುಳ್ಳವರಾಗಿ, ತಂದೆಯ ಮನಸ್ಸು ಎಷ್ಟು ವಿಶಾಲವಾಗಿದೆ. ಸಣ್ಣದಾಗಿದೆಯೇ, ತಂದೆಯು ವಿಶಾಲ ಹೃದಯವುಳ್ಳವರಾಗಿರುವಾಗ ಮಕ್ಕಳು ಸಂಕುಚಿತ(ಚಿಕ್ಕ) ಹೃದಯವುಳ್ಳವರಾಗಿ ಬಿಡುತ್ತೀರಲ್ಲವೇ. ಅಸ್ವಸ್ಥರಾಗಿ ಬಿಟ್ಟರೆ, ಅಳಲು ಪ್ರಾರಂಭ ಮಾಡಿಬಿಡುತ್ತಾರೆ. ನೋವಾಗಿ ಬಿಟ್ಟಿತು, ನೋವಾಗಿ ಬಿಟ್ಟಿತು ಎಂದು ಅಳುತ್ತಾರೆ. ಹೀಗೆ ವ್ಯಾಕುಲರಾಗುವುದು ಔಷಧಿಯಾಗಿದೆಯೇ? ಇದರಿಂದ ರೋಗವು ನಿವಾರಣೆಯಾಗಿ ಬಿಡುವುದೋ ಅಥವಾ ಹೆಚ್ಚುವಾಗುವುದೋ? ಯಾವಾಗ ಕರ್ಮದ ಲೆಕ್ಕಾಚಾರವು ಬಂದುಬಿಟ್ಟಿತೋ, ನೋವು ಬಂದುಬಿಟ್ಟಿತೋ, ನೋವು ಬಂದುಬಿಟ್ಟಾಗ ಲೆಕ್ಕಾಚಾರವು ಮುಕ್ತಾಯವಾಗಲು ಬಂದಿತಲ್ಲವೇ. ಆ ಸಮಯದಲ್ಲಿ ವ್ಯಾಕುಲರಾಗುವುದರಿಂದ ರೋಗವನ್ನು ದೊಡ್ಡದಾಗಿ ಮಾಡಿಕೊಳ್ಳುತ್ತೀರಿ. ಆದ್ದರಿಂದ ಧೈರ್ಯವುಳ್ಳವರಾಗಿರಿ. ತಂದೆಯೂ ಸಹ ಸಹಾಯಕನಾಗುವನು.. ಅಯ್ಯೋ ಏನು ಮಾಡಲಿ. ಏನು ಮಾಡಲಿ ಎಂದು ಪ್ರಲಾಪ ಮಾಡುತ್ತಾ ತಂದೆಯ ಸಹಾಯವಂತೂ ಸಿಗಲಿಲ್ಲ. ತಂದೆಯೂ ಸಹ ಸಮಯಕ್ಕೆ ನೆರವಾಗುವುದೇ ಇಲ್ಲ ಎಂದು ಯೋಚಿಸಲು ತೊಡಗುತ್ತೀರಿ. ಹೀಗೆ ಅರ್ಧ ವಾಕ್ಯವನ್ನು ನೆನಪು ಮಾಡಬೇಡಿರಿ. ತಂದೆಯು ಸಹಾಯಕನಾಗಿದ್ದೇನೆ. ಆದರೆ ಯಾರಿಗೆ? ಹೀಗೆ ಅರ್ಧ ವಾಗ್ದಾನವನ್ನು ಮರೆತು ಬಿಡುತ್ತೀರಿ. ಇನ್ನರ್ಧವನ್ನು ನೆನಪಿಟ್ಟುಕೊಳ್ಳುತ್ತೀರಿ. ತಂದೆಯು ಮಹಾರಥಿಗಳಿಗೆ ಸಹಾಯ ಮಾಡುತ್ತಾರೆಂದು ಕಾಣುತ್ತದೆ. ನಮಗಂತೂ ಮಾಡುವುದೇ ಇಲ್ಲ. ನಮಗಂತೂ ಮಾಡುವುದೇ ಇಲ್ಲ. ನಮ್ಮನ್ನಂತೂ ನೋಡುವುದೇ ಇಲ್ಲವೆಂದು" ಕಾಣುತ್ತದೆ. ಮೊದಲು ನೀವು, ಆಮೇಲೆ ಮಹಾರಥಿಗಳು. ಆದರೆ ವ್ಯಾಕುಲರೂ, ಎದೆಗುಂದಿದವರೂ ಆಗಬೇಡಿರಿ, ಹಾಗೂ ಮನಸ್ಸಿನಲ್ಲಿ ಒಂದುವೇಳೆ ಏನಾದರೂ ಪೇಚಾಟವು ಬಂದು ಬಿಟ್ಟರೆ ಏನಾಗುತ್ತದೆ. ಅಂತಹ ಸಮಯದಲ್ಲಿ ನಿರ್ಣಯ ಶಕ್ತಿಯ ಅಗತ್ಯವಿರುತ್ತದೆ ಹಾಗೂ ನಿರ್ಣಯ ಶಕ್ತಿಯು ಯಾವಾಗ ಬರಲು ಸಾಧ್ಯವಿದೆಯೆಂದರೆ, ಯಾವಾಗ ನಿಮ್ಮ ಮನಸ್ಸು ತಂದೆಯ ಕಡೆಗೆ ಇರುತ್ತದೆಯೋ ಆಗ. ಒಂದುವೇಳೆ ನಿಮ್ಮ ಪೇಚಾಟದಲ್ಲಿಯೇ ಮುಳುಗಿದ್ದರೆ, ಇದೇ ತೊಡಕಿನಲ್ಲಿ ಉಳಿದುಬಿಡುವಿರಿ. ಆದ್ದರಿಂದ ಮನಸ್ಸಿನಿಂದಲೂ ವ್ಯಾಕುಲರಾಗಬೇಡಿರಿ ಹಾಗೂ ಹಣವೂ ಸಹ ನಷ್ಟದ ಖಾತೆಯಲ್ಲಿ ಬರಬಹುದು. ಕೋಟ್ಯಾಧೀಶರದೇ ಏರುಪೇರಾಗುವಾಗ ಅವರ ಮುಂದೆ ನೀವು ಏನಾಗಿದ್ದೀರಿ. ಆದಂತೂ ಆಗಿಯೇ ಆಗಲಿದೆ. ಆದರೆ ನಿಮಗೆ ಪಕ್ಕಾ ನಿಶ್ಚಯವಿದೆ - ಯಾರು ತಂದೆಯ ಸಾಥಿಯಾಗಿದ್ದಾರೋ, ಸತ್ಯವಂತರಾಗಿದ್ದಾರೋ ಅವರಿಗೆ ಎಂತಹ ಪರಿಸ್ಥಿತಿಯಲ್ಲಿಯಾದರೂ ಬಾಪ್‌ದಾದಾರವರು ರೊಟ್ಟಿ

ಬೇಳೆಯನ್ನು (ಅನ್ನ ಸಾರನ್ನು) ಅವಶ್ಯವಾಗಿ ತಿನ್ನಿಸುವರು. ಎರಡೆರಡು ಕಾಯಿ-ಪಲ್ಯಗಳನ್ನು ತಿನ್ನಿಸುವುದಿಲ್ಲ. ರೊಟ್ಟಿ ಬೇಳೆಯನ್ನು ತಿನ್ನಿಸುವರು. ಆದರೆ ಕೆಲಸದಿಂದ ಸುಸ್ತಾಗಿ ಕುಳಿತುಬಿಟ್ಟು ತಂದೆಯು ಊಟ ಮಾಡಿಸುವರೆಂದು ಹೇಳಬೇಡಿರಿ. ಇಂತಹ ಹುಡುಗಾಟಿಕೆ ಅಥವಾ ಆಲಸ್ಯ(ಸೋಮಾರಿತನ)ವುಳ್ಳವರಿಗೆ ಊಟವು ದೊರೆಯುವುದಿಲ್ಲ. ಆದರೆ ಸತ್ಯವಾದ ಹೃದಯವುಳ್ಳವರ ಮೇಲೆ ಈಶ್ವರನು ಪ್ರಸನ್ನನಾಗುತ್ತೇನೆ. ಹಾಗೂ ಪರಿವಾರದಲ್ಲಿಯೂ ಸಹ ವೈಮನಸ್ಯವಂತೂ ಉಂಟಾಗಲಿದೆ ಅತಿಯಾದ ನಂತರ ಅಂತ್ಯವಾಗುತ್ತದೆ ಎಂದು ನೀವು ಹೇಳುತ್ತೀರಿ, ಅತಿಯಲ್ಲಿ ಹೋಗುತ್ತಾ ಇದೆ ಹಾಗೂ ಹೋಗಲಿದೆ ಆದ್ದರಿಂದ ಪರಿವಾರದಲ್ಲಿ ಮನಸ್ತಾಪವುಂಟಾಗಬಾರದು ಎಂದರೆ ಅದು ಆಗುವುದಿಲ್ಲ. ವೈಮನಸ್ಯವುಂಟಾಗಲಿದೆ ಆದರೆ ನೀವು ನಿಮಿತ್ತವಾಗಿ, ಸಾಕ್ಷಿಯಾಗಿ ಪರಿಸ್ಥಿತಿಯನ್ನು ತಂದೆಯಿಂದ ಶಕ್ತಿಯನ್ನು ತೆಗೆದುಕೊಂಡು ಪರಿಹಾರ ಮಾಡಿಕೊಳ್ಳಿರಿ. ಗೃಹಸ್ಥರಾಗಿ ವಿಚಾರ ಮಾಡಿದರೆ ಇನ್ನೂ ಗಡಿಬಿಡಿಯಾಗುವುದು. ಮೊದಲು ಸಂಪೂರ್ಣವಾಗಿ ಅತೀತ ಮತ್ತು ನಿಮಿತ್ತವಾಗಿರಿ. ನನ್ನದು ಎಂಬ ಭಾವನೆ ಇರಬಾರದು. ಈ ನನ್ನದು ಎಂದರೆ.. ನನ್ನ ಹೆಸರು ಹಾಳಾಗಿಬಿಡುತ್ತದೆ, ನನ್ನನ್ನು ನಿಂದನೆ ಮಾಡುತ್ತಾರೆ, ನನ್ನ ಮಕ್ಕಳನ್ನು ಮತ್ತು ನನ್ನನ್ನು ನನ್ನ ಅತ್ತೆ ನನ್ನನ್ನು ಹೀಗೆ ಮಾಡುತ್ತಾರೆ. ಈ ನನ್ನತನವು ಬಂದಾಗ ಎಲ್ಲಾ ಪೇಚಾಟಗಳು ಬರುತ್ತವೆ. ನನ್ನದು ನನ್ನವರು ಎನ್ನುವುದು ಬಂದರೆ ಅಲ್ಲಿ ಬುದ್ಧಿಯು ತಿರುಗುಮುರುಗಾಗಿ ಬಿಡುತ್ತದೆ. ಬದಲಾಗಿ ಬಿಡುತ್ತದೆ. ಒಂದುವೇಳೆ ಬುದ್ಧಿಯು ಏನಾದರೂ ತೊಡಕಿನಲ್ಲಿ ಬದಲಾದರೆ ಇದು ನನ್ನತನ ಆಗಿದೆಯೆಂದು ತಿಳಿದುಕೊಳ್ಳಿರಿ. ಅದನ್ನು ಪರಿಶೀಲನೆ ಮಾಡಿಕೊಳ್ಳಿರಿ. ಆಗ ಎಷ್ಟು ತೊಡಕನ್ನು ಬಿಡಿಸಲು ಪ್ರಯತ್ನ ಮಾಡುತ್ತೀರೋ, ಅಷ್ಟು ಸಿಕ್ಕಿಹಾಕಿಕೊಳ್ಳುವಿರಿ. ಆದ್ದರಿಂದ ಈ ಎಲ್ಲಾ ಘಟನೆಗಳಿಂದ ಏನಾಗಬಾರದು? ಏನಾಗುವುದಿಲ್ಲ? (ವ್ಯಾಕುಲ) ಕೇವಲ ಹೇಳಬೇಡಿರಿ, ಮಾಡಿರಿ. ಭಗವಂತನ ಮಕ್ಕಳಾಗಿದ್ದೇವೆ ಎನ್ನುವುದಂತೂ ಪಕ್ಕಾ ಪ್ರತಿಜ್ಞೆಯಾಗಿದೆಯಲ್ಲವೇ. ಇದನ್ನಂತೂ ಮಾಯೆಯೂ ಸಹ ಅಲುಗಾಡಿಸಲು ಸಾಧ್ಯವಾಗುವುದಿಲ್ಲ. ಯಾವಾಗ ಇದು ಪಕ್ಕಾ ಪ್ರತಿಜ್ಞೆಯಾಗಿದೆಯೋ, ನಿಶ್ಚಯವಿದೆಯೋ ಆಗ ಭಗವಂತನ ಮಕ್ಕಳೂ ಸಹ ವ್ಯಾಕುಲರಾಗಿಬಿಟ್ಟರೆ ವಿಶಾಲ ಹೃದಯವನ್ನು ಇಟ್ಟುಕೊಳ್ಳುವವರು ಯಾರಿರುತ್ತಾರೆ? ಅನ್ಯರು ಯಾರಾದರೂ ಇರುತ್ತಾರೆಯೇ? ನೀವೇ ಆಗಿದ್ದೀರಲ್ಲವೇ ಹಾಗಾದರೆ ಏನು ಮಾಡುವಿರಿ? ಈಗ ಸಮರ್ಥರಾಗಿರಿ ಹಾಗೂ ತಂದೆಯನ್ನು ಪ್ರತ್ಯಕ್ಷ ಮಾಡುವ (ಸನ್ ಶೋಸ್ ಫಾದರ್) ಪಾಠವನ್ನು ಪಕ್ಕಾ ಮಾಡಿಕೊಳ್ಳಿರಿ. ಕಚ್ಚಾ ಮಾಡಿಕೊಳ್ಳಬೇಡಿರಿ. ಪಕ್ಕಾ ಮಾಡಿಕೊಳ್ಳಿರಿ. ಎಲ್ಲರೂ ಧೈರ್ಯಶಾಲಿಗಳಾಗಿದ್ದೀರಲ್ಲವೇ? ಧೈರ್ಯವಿದೆಯೇ?

ಡೈಮಂಡ್ ಜುಬ್ಲಿ ವರ್ಷದಲ್ಲಿ ಪ್ರತಿ ಜೋನಿಗೆ ಯಾವುದೋ ಒಂದು ಕಾರ್ಯವನ್ನು ಕೊಟ್ಟಿದ್ದಾರೆ. ಯುವಕರಿಗೆ ಕಾರ್ಯವನ್ನು ಕೊಟ್ಟಿದ್ದಾರೆ, ಕುಮಾರಿಯರಿಗೆ ಕಾರ್ಯವನ್ನು ಕೊಟ್ಟಿದ್ದಾರೆ, ಕುಟುಂಬದಲ್ಲಿರುವವರಿಗೂ ಕೊಟ್ಟಿದ್ದಾರೆ, ಆ ಕಾರ್ಯವನ್ನು ಮರೆಯಬಾರದು. ಬಾಪ್‌ದಾದಾ ಒಂದು ಚಿಕ್ಕ ನೆಕ್ಲೆಸ್‌ಅನ್ನು ತಯಾರು ಮಾಡಿ ತನ್ನಿರಿ, ಕಂಕಣವನ್ನು ತಯಾರು ಮಾಡಿ ತನ್ನಿರಿ, ದೊಡ್ಡ ಹಾರವನ್ನು ತಯಾರು ಮಾಡಿ ತನ್ನಿರಿ ಆದರೆ ಯಾವುದೋ ಒಂದು ತಪ್ಪದೇ ತರಬೇಕು. ಖಾಲಿ ಕೈಯಿಂದ ಬರಬಾರದು ಎಂದು ಹೇಳುತ್ತಾರೆ ಏಕೆಂದರೆ ಬಹಳ ಆತ್ಮರು ಗೊಂದಲದಿಂದ, ದುಃಖಿಯಾಗಿ ಇದ್ದಾರೆ. ಅವರಲ್ಲಿ ಮುಂದಕ್ಕೆ ಹೋಗುವ ಧೈರ್ಯವಿಲ್ಲ. ಮಾಸ್ಟರ್ ಸರ್ವಶಕ್ತಿವಂತರಾದ ನೀವು ಅವರಿಗೆ ಧೈರ್ಯವನ್ನು ಕೊಟ್ಟರೆ

ಬಂದುಬಿಡುತ್ತಾರೆ.  ಯಾರಿಗಾದರೂ ಕಾಲಿಲ್ಲದಿದ್ದರೆ ಕಟ್ಟಿಗೆಯ ಕಾಲು ತಯಾರು ಮಾಡಿಕೊಟ್ಟರೆ ಅವುಗಳ ಆಧಾರದಿಂದ ನಡೆಯುತ್ತಾರಲ್ಲವೇ. ಹಾಗೆಯೇ ನೀವು ಧೈರ್ಯ ಎಂಬ ಕಾಲುಗಳನ್ನು ಕೊಡಿ. ಕಟ್ಟಿಗೆಯವಲ್ಲ ಧೈರ್ಯ ಎಂಬ ಕಾಲನ್ನು ಕೊಡಿ ಬಹಳ ದುಃಖದಿಂದ ಇದ್ದಾರೆ. ಬಾಪ್‌ದಾದಾ ಅಜ್ಞಾನಿ ಮಕ್ಕಳಲ್ಲಿಯೂ ಕೂಡ ನೋಡುತ್ತಾರಲ್ಲವೇ? ಒಳಗಡೆ ಯಾವ ಪರಿಸ್ಥಿತಿ ಇದೆ ಎಂದು ಹೊರಗೆ ಷೋಗಾಗಿ ಟಿಪ್ ಟಾಪ್ ಆಗಿ ಇದ್ದಾರೆ ಆದರೆ ಒಳಗೆ ಬಹಳ ಬಹಳ ದುಃಖವಿದೆ. ನೀವು ಬಹಳ ಒಳ್ಳೆಯ ಸಮಯಕ್ಕೆ ಮಕ್ಕಳಾಗಿದ್ದೀರಿ ಅರ್ಥಾತ್ ರಕ್ಷಿಸಲ್ಪಟ್ಟಿದ್ದೀರಿ. ಒಳ್ಳೆಯದು.

**ನಾಲ್ಕೂ ಕಡೆಯ ಸರ್ವಸಮರ್ಥ ಆತ್ಮರಿಗೆ ಸರ್ವ ಮಾಯಾಜೀತರೂ, ಪ್ರಕೃತಿಜೀತರೂ ಆದ ಆತ್ಮರಿಗೆ,  ಸದಾ ಸನ್ ಶೋಸ್ ಫಾದರ್ ಮಾಡುವ ಮಕ್ಕಳಿಗೆ, ಸದಾ ಮನಸಾ ಸಂತೋಷವುಳ್ಳವರಾಗಿರುವ ಮಕ್ಕಳಿಗೆ ಬಾಪ್‌ದಾದಾರವರ ನೆನಪು ಪ್ರೀತಿ ಹಾಗೂ ನಮಸ್ತೆ.**

ಈ ದಿನ ವಿದೇಶದಲ್ಲಿರುವ ಮಕ್ಕಳೂ ಸಹ ತುಂಬಾ ನೆನಪಿಗೆ ಬರುತ್ತಾ ಇದ್ದಾರೆ. ನಾಲ್ಕೂ ಕಡೆ ಮಧುಬನದೊಂದಿಗೆ ಮನಸ್ಸಿನ ಜೋಡಣೆಯು ಜೋಡಿಸಲ್ಪಟ್ಟಿದೆ. ಬಾಪ್ ದಾದಾರವರೂ ಸಹ ಎಲ್ಲಾ ಮಕ್ಕಳನ್ನೂ ಎದುರಿಗೆ ನೋಡಿ ವಿಶೇಷ ನೆನಪು ಹಾಗೂ ಸೇವೆಯ ನೆನಪು-ಪ್ರೀತಿಯನ್ನು ನೀಡುತ್ತಾ ಇದ್ದಾರೆ.

ಬಾಪ್‌ದಾದಾರವರು ಒಂಭತ್ತು ರತ್ನಗಳಲ್ಲಿ ಬರುವುದಕ್ಕೆ ಯಾವ ಒಂಭತ್ತು ಮಾತುಗಳಿಂದ ಮುಕ್ತರಾಗಲು ತಿಳಿಸಿದ್ದಾರೆ ಅವು ಇಲ್ಲಿವೆ:- 1,ಕ್ರೋಧದಿಂದ ಮುಕ್ತ,

2.ವ್ಯರ್ಥ ಸಂಕಲ್ಪಗಳಿಂದ ಮುಕ್ತ.

3.ಸೆಳೆತ/ ಅಕರ್ಷಣೆಗಳಿಂದ ಮುಕ್ತ,

4.ಪರಮತ, ಪರಚಿಂತನೆ ಮತ್ತು ಪರದರ್ಶನದಿಂದ ಮುಕ್ತ,

5.ಅಭಿಮಾನ ಅಥವಾ  ಅಪಮಾನದಿಂದ ಮುಕ್ತ,

6.ಜಂಜಾಟಗಳಿಂದ ಮುಕ್ತ,

7.ವ್ಯರ್ಥ ಮಾತು, ತೊಂದರೆ ಮಾಡುವಂತಹ ಮಾತುಗಳಿಂದ ಮುಕ್ತ,

8.ಅಪ್ರಸನ್ನತೆಯಿಂದ ಮುಕ್ತ,

9.ಹೃದಯವಿಧೀರ್ಣರಾಗುವುದರಿಂದ (ಬಲಹೀನತೆ) ಮುಕ್ತ.

ರಿವೈಸ್ ಕೋರ್ಸ್ 18-01-1996.

***ಸದಾ ಸಮರ್ಥರಾಗಿರುವ ಸಲುವಾಗಿ ಸಹಜವಾದ ವಿಧಿ ಶುಭ ಚಿಂತನೆ ಮಾಡಿರಿ ಹಾಗೂ ಶುಭ ಚಿಂತಕರಾಗಿರಿ.***

ಸದಾ ಸಮರ್ಥರಾಗಿ ಇರಲು ಬಾಪ್‌ದಾದಾ ಎಲ್ಲದಕ್ಕಿಂತಲೂ ಸಹಜವಾದ ವಿಧಿಯನ್ನು ಎರಡು ಶಬ್ದಗಳಲ್ಲಿ ತಿಳಿಸುತ್ತಿದ್ದಾರೆ. ಆ ಎರಡು ಶಬ್ದಗಳನ್ನು ನೆನಪಿಟ್ಟುಕೊಂಡು ಕಾರ್ಯರೂಪದಲ್ಲಿ ಆಚರಣೆಯಲ್ಲಿ ತರುತ್ತಾ ಹೋಗಿರಿ. ಒಂದು ಶುಭ ಚಿಂತನೆ ಎರಡು ನಕಾರಾತ್ಮಕ, ವಿಧ್ವಾಂಸಕವಾದುದನ್ನು ಕೂಡ ಸಕಾರಾತ್ಮಕ, ರಚನಾತ್ಮಕವಾಗಿ ಮಾಡಿಕೊಳ್ಳಿ ಇದನ್ನು ಶುಭ ಚಿಂತನೆ ಎಂದು ಕರೆಯಲಾಗುತ್ತದೆ. ನೀವು ನಕಾರಾತ್ಮಕವಾದದನ್ನು ಸಕಾರಾತ್ಮಕವನ್ನಾಗಿ ಪರಿವರ್ತನೆ ಮಾಡಲು ಸಾಧ್ಯವಿದೆ. ಕೆಲ ಜನರು ವಾಣಿಯಿಂದ ತಿಳಿದುಕೊಳ್ಳದಿದ್ದರೂ ಶುಭ ಚಿಂತಕರಾಗಿ ಶುಭವಾದ ವೈಬ್ರೇಶನ್ ಗಳನ್ನು ನೀಡಿದರೆ ಪರಿವರ್ತನೆ ಆಗಿಬಿಡುತ್ತಾರೆ. ಆದ್ದರಿಂದ ಎಂತಹದ್ದೇ ಪರಿಸ್ಥಿತಿ ಬಂದರು ವಿಶಾಲ ಹೃದಯವುಳ್ಳವರಾಗಿರಿ, ವ್ಯಾಕುಲರಾಗಬೇಡಿರಿ ಎಂದು ತಿಳಿಸುತ್ತಾ ಶಿವಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಪ್ರೇಮ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಬ್ರಹ್ಮಾ ತಂದೆಯ ಸಮಾನವಾದ ಸಂಪೂರ್ಣ ನಷ್ಟೋಮೋಹ ಸ್ಮೃತಿ ಸ್ವರೂಪ.

2. ನಾನು ಸೇವೆಯಲ್ಲಿ ಬ್ರಹ್ಮಾ ತಂದೆಗೆ ಸಾಥಿಯಾಗಿ ಮತ್ತು ಮಾಯೆಯ ಪರೀಕ್ಷೆಯಲ್ಲಿ ಸಾಕ್ಷಿಯಾಗಿ ಇದ್ದೇನೆ.

3. ನಾನು ಮಾಯೆ ಎಂತಹ ವಿಕರಾಳ (ವಿರಾಟ) ರೂಪದಿಂದ ಬಂದರೂ ಸಾಕ್ಷಿಯಾಗಿ ಆಟವಾಡಿ ಮಜಾವನ್ನು ಅನುಭವ ಮಾಡಿಕೊಂಡಿದ್ದೇನೆ.

4. ನಾನು ಮಾಯೆಯನ್ನು ನೋಡಿ ಏನು ಮಾಡಲಿ, ಹೇಗಾಗುತ್ತದೆಯೋ, ಏನಾಗುತ್ತದೆಯೋ ಎಂಬುದನ್ನು ಸಮಾಪ್ತಿ ಮಾಡಿ ಆಗುವುದೆಲ್ಲಾ ಒಳ್ಳೆಯದೇ, ಒಳ್ಳೆಯದೇ ಆಗುತ್ತದೆ ಎಂಬ ಪಾಠವನ್ನು ಪಕ್ಕಾ ಮಾಡಿಕೊಂಡಿದ್ದೇನೆ.

5. ನನ್ನನ್ನು ಪರಿಸ್ಥಿತಿಗಳು ಶಿಕ್ಷಕನಾಗಿ ಸಹನೆ ಶಕ್ತಿ, ಅತೀತ ಸ್ಥಿತಿ, ನಷ್ಟೋ ಮೋಹ, ಎದುರಿಸುವ ಶಕ್ತಿಯ ಅನುಭವಿಯನ್ನಾಗಿ ಮಾಡಿವೆ.

6. ನಾನು, ನನ್ನದು ಎಂದು ಏನೂ ಇರದೆ ಎಲ್ಲಾ ತಂದೆಗೆ ಅರ್ಪಣೆ ಮಾಡಿರುವ ಸಮರ್ಥ ಸ್ವರೂಪ.

7. ನಾನು ಶುಭ ಚಿಂತನೆಯಿಂದ ಶುಭ ಚಿಂತಕನಾಗುವ ಸಮರ್ಥ ಸ್ವರೂಪ.

8. ನಾನು 9 ವಿಷಯಗಳಿಂದ ಮುಕ್ತವಾಗಿ ನವರತ್ನಗಳಲ್ಲಿ ಸ್ಥಾನವನ್ನು ಪಡೆದಿದ್ದೇನೆ.

9. ನಾನು ಶರೀರದ ರೋಗವಿರಲಿ, ಮನಸ್ಸಿನ ಬಿರುಗಾಳಿ ಇರಲಿ, ಶರೀರದ ಗೊಂದಲವಾಗಲಿ, ಕುಟುಂಬದಲ್ಲಿ ಗೊಂದಲ ಬಂದರೂ ಸೇವೆಯಲ್ಲಿ ಮನಸ್ತಾಪವುಂಟಾದರೂ ಯಾವುದಾದರೂ ಪ್ರಕಾರದ ಗಡಿಬಿಡಿಯಲ್ಲಿ ಕೂಡ ವ್ಯಾಕುಲವಾಗದೆ ತಂದೆ ಸಮಾನವಾದ ವಿಶಾಲ ಹೃದಯ ಮತ್ತು ಧೈರ್ಯದಿಂದ ತಂದೆಯ ಸಹಾಯವನ್ನು ಪಡೆದಿದ್ದೇನೆ ಮತ್ತು ಮನಸ್ಸನ್ನು ತಂದೆಯೊಂದಿಗೆ ಜೋಡಿಸಿ ನಿರ್ಣಯ ಶಕ್ತಿಯ ಅನುಭವ ಮಾಡಿದ್ದೇನೆ.

10. ನಾನು ಎಂತಹ ಪರಿಸ್ಥಿತಿಯಲ್ಲಾದರೂ ಸತ್ಯವಾದ ಹೃದಯಕ್ಕೆ ಈಶ್ವರನು ಪ್ರಸನ್ನರಾಗುತ್ತಾರೆ ಎಂಬ ಸ್ಮೃತಿಯಲ್ಲಿದ್ದೇನೆ.

11. ಕುಟುಂಬದ ಗೊಂದಲಗಳು ಬಂದರೂ ನಾನು ನಿಮಿತ್ತವಾಗಿ, ಸಾಕ್ಷಿಯಾಗಿ ಪರಿಸ್ಥಿತಿಯನ್ನು ತಂದೆಯ ಶಕ್ತಿಯಿಂದ ಪರಿಷ್ಕರಿಸುತ್ತಿದ್ದೇನೆ.

12. ನಾನು "ನನ್ನದು" ಎಂಬ ಭಾವನೆಯನ್ನು ಸಮಾಪ್ತಿ ಮಾಡಿ ಸಂಪೂರ್ಣ ಅತೀತವಾಗಿ, ನಿಮಿತ್ತವಾಗಿ ಇದ್ದೇನೆ.

13. ನಾನು ಎಲ್ಲಾ ವಿಷಯಗಳಲ್ಲಿ ವ್ಯಾಕುಲವಾಗುವ ಸಂಸ್ಕಾರವನ್ನು ಸಮಾಪ್ತಿ ಮಾಡಿ ಸಮರ್ಥ ಮತ್ತು "ತಂದೆಯನ್ನು ಪ್ರತ್ಯಕ್ಷ ಮಾಡುವ ಮಕ್ಕಳು" ಎಂಬ ಪಾಠವನ್ನು ಪಕ್ಕಾ ಮಾಡಿಕೊಂಡಿದ್ದೇನೆ.

14. ನಾನು ಮಾಸ್ಟರ್ ಸರ್ವ ಶಕ್ತಿವಂತನಾಗಿ ದುಃಖದಲ್ಲಿರುವ ಆತ್ಮರಿಗೆ ಧೈರ್ಯವನ್ನು ಕೊಡುವ ದಯಾ ಹೃದಯ ಸ್ವರೂಪ.